# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521

**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.**

ಅಂತರ್ಜಾಲ : https://kptcl.karnataka.gov.in

ದೂರವಾಣಿ ಸಂಖ್ಯೆ : 080-22212343

ಇ-ಮೇಲ್ ವಿಳಾಸ : director.ahr.kptcl@gmail.com


**ಸಂಖ್ಯೆ: ಕವಿಪ್ರನಿನಿ/ಬಿ5/721/80-81(Vol-II)** **ದಿನಾಂಕ:** 4 APR 2024

## ಸುತ್ತೋಲೆ

**ವಿಷಯ:** ಸೇವೆಯಲ್ಲಿರುವಾಗಲೇ ನಿಧನ ಹೊಂದಿದ ನೌಕರನ ಅವಲಂಬಿತರು ಅನುಕಂಪದ ಆಧಾರದ ನೇಮಕಾತಿಗಾಗಿ ಸಲ್ಲಿಸುವ ಅರ್ಜಿಗಳಿಗೆ ಕುಟುಂಬದ ಮಾಸಿಕ ಆದಾಯ ಮಿತಿಯನ್ನು ಪರಿಷ್ಕರಿಸುವ ಬಗ್ಗೆ.

**ಉಲ್ಲೇಖ:**
1. ನಿಗಮದ ದಿನಾಂಕ: 17.04.1997 ರ ಅಧಿಸೂಚನೆ ಸಂಖ್ಯೆ: ಕವಿಮಂ/ ಬಿ5/721/80-81.
2. ನಿಗಮದ ದಿನಾಂಕ: 17.08.2009 ರ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ5ಸಿ/721/80-81.
3. ನಿಗಮದ ಸುತ್ತೋಲೆ ಸಂಖ್ಯೆ: ಕವಿಮಂ/ಬಿ5/721/80-81, ದಿನಾಂಕ: 02.05.1997, 12.04.2010, 23.09.2011, 20.02.2013, 11.11.2013, 31.12.2014, 08.06.2015, 05.01.2016, 28.04.2016, 01.12.2016, 26.10.2017, 13.08.2018, 30.11.2018, 12.04.2019, 13.11.2019, 18.09.2021, 09.12.2021, 22.04.2022, 17.11.2022, 13.07.2023 ಮತ್ತು 14.12.2023.

*****

ಕವಿಮಂ ನೌಕರರ ಭರ್ತಿ (ಅನುಕಂಪದ ಆಧಾರದ ನೇಮಕಾತಿ) ನಿಯಮಾವಳಿಗಳು 1997 ರ ನಿಯಮ 4 ಉಪ ಕಂಡಿಕೆ (1)(ಎ) ರಲ್ಲಿ ಅನುಕಂಪದ ಆಧಾರದ ನೇಮಕಾತಿಗಾಗಿ, ನಿಧನ ಹೊಂದಿದ ನೌಕರನ ಅವಲಂಬಿತರ ಆರ್ಥಿಕ ಬಿಕ್ಕಟ್ಟು ಅಥವಾ ನಿರ್ಗತಿಕತೆಯನ್ನು ನಿರ್ಧರಿಸಲು, ಅವರು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿನ ಕುಟುಂಬದ ಒಟ್ಟು ಮಾಸಿಕ ಆದಾಯವನ್ನು ಪರಿಶೀಲಿಸುವ ಬಗ್ಗೆ ದಿನಾಂಕ: 17.08.2009 ರ ನಿಗಮದ ಅಧಿಸೂಚನೆಯಲ್ಲಿ ತಿದ್ದುಪಡಿ ಮಾಡಲಾಗಿರುತ್ತದೆ. ಈ ಪ್ರಕಾರವಾಗಿ, ರಾಜ್ಯ ಸರ್ಕಾರವು ಮನೆ ಬಾಡಿಗೆ ಭತ್ಯೆ ಹಾಗೂ ತುಟ್ಟಿಭತ್ಯೆಯನ್ನು ಕಾಲ ಕಾಲಕ್ಕೆ ಪರಿಷ್ಕರಿಸಿ ಆದೇಶವನ್ನು ಹೊರಡಿಸಿದ ಸಂದರ್ಭದಲ್ಲಿ, ಸದರಿ ಆದೇಶವನ್ನು ನಿಗಮದಲ್ಲಿ ಅಳವಡಿಸಿಕೊಂಡು, ಈ ನಿಯಮಾವಳಿಗಳ ಅಡಿಯಲ್ಲಿ ಕುಟುಂಬದ ಮಾಸಿಕ ಆದಾಯದ ಮಿತಿಯನ್ನು ಪರಿಷ್ಕರಿಸಿ ಸುತ್ತೋಲೆ ಹೊರಡಿಸಲಾಗುತ್ತಿದೆ.

ರಾಜ್ಯ ಸರ್ಕಾರವು ಜನವರಿ-2024 ರಿಂದ ಜಾರಿಗೆ ಬರುವಂತೆ ತುಟ್ಟಿಭತ್ಯೆಯ ದರವನ್ನು ಶೇ.38.75 ರಿಂದ ಶೇ.42.50 ಕ್ಕೆ ಪರಿಷ್ಕರಿಸಿದೆ. ಅದರಂತೆ ಕವಿಮಂ ನೌಕರರ ನೇಮಕಾತಿ (ಅನುಕಂಪ ಆಧಾರದ ಮೇಲೆ ನೇಮಕಾತಿ) ನಿಯಮಾವಳಿಗಳು 1997 ರ ನಿಯಮ ಉಪ ಕಂಡಿಕೆ 4(1)(ಎ) ಕ್ಕೆ ಕುಟುಂಬದ ಮಾಸಿಕ ಆದಾಯದ ಮಿತಿಯನ್ನು ಲೆಕ್ಕಹಾಕಿ ಈ ಕೆಳಕಂಡಂತೆ ತಿಳಿಸಲಾಗಿದೆ:

- ***ದಿನಾಂಕ: 01.01.2024 ರ ನಂತರ ಅನುಕಂಪ ಆಧಾರದ ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಒಟ್ಟು ಕುಟುಂಬದ ಮಾಸಿಕ ಆದಾಯವನ್ನು ರೂ.63187/-ಕ್ಕೆ ಮಿತಿಗೊಳಿಸಲಾಗಿದೆ.***

**ಸೂಚನೆ:** **ನಿಗಮದ ದಿನಾಂಕ: 08.11.2021 ರ ಆದೇಶದನ್ವಯ ಈ ಕುಟುಂಬದ ಮಾಸಿಕ ಆದಾಯ ಮಿತಿಯು ಗುಂಪು 'ಸಿ' ಮತ್ತು 'ಡಿ' ಗೆ ಸೇರಿದ ನಿಗಮದ ನೌಕರರಿಗೆ ಅನ್ವಯವಾಗುವುದಿಲ್ಲ.**

ಅನುಕಂಪದ ಆಧಾರದ ನೇಮಕಾತಿಗಾಗಿ ಸಲ್ಲಿಸಲಾಗುವ ಎಲ್ಲಾ ಅರ್ಜಿಗಳನ್ನು ಕಾಲಕಾಲಕ್ಕೆ ಈ ಕಚೇರಿಯಿಂದ ಹೊರಡಿಸಲಾಗುವ ನಿಯಮಾವಳಿಗಳು ಹಾಗೂ ಸುತ್ತೋಲೆಗಳ ಅನುಸಾರ ಪರಿಗಣಿಸಿ ತ್ವರಿತವಾಗಿ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ಈ ಮೂಲಕ ತಿಳಿಸಲಾಗಿದೆ.

**ನಿರ್ದೇಶಕರು**
**(ಆಡಳಿತ ಮತ್ತು ಮಾನವ ಸಂಪನ್ಮೂಲ)**
**ಕವಿಪ್ರನಿನಿ**

**ಗೆ,**

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ ಜೆಸ್ಕಾಂ/ ಹೆಸ್ಕಾಂ/ ಮೆಸ್ಕಾಂ/ ಸೆಸ್ಕ/ ಪಿ.ಸಿ.ಕೆ.ಎಲ್.
2. ಎಲ್ಲಾ ನಿರ್ದೇಶಕರು (ತಾಂತ್ರಿಕ), ಎಸ್ಕಾಂಗಳು.
3. ಎಲ್ಲಾ ನಿರ್ದೇಶಕರು (ಹಣಕಾಸು), ಎಸ್ಕಾಂಗಳು.
4. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ ಎಸ್ಕಾಂಗಳು.
5. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ ಎಸ್ಕಾಂಗಳು.
6. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.

https://kptcl.karnataka.gov.in/eprasarana for information of:

7. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ ಎಸ್ಕಾಂಗಳು.
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ ಎಸ್ಕಾಂಗಳು.
9. ಕ್ರೋಢೀಕರಣ ಶಾಖೆ, ಕವಿಪ್ರನಿನಿ., ಕಾವೇರಿ ಭವನ, ಬೆಂಗಳೂರು.
10. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ., ಕಾವೇರಿ ಭವನ, ಬೆಂಗಳೂರು.

**ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-**

1. ಶ್ರೀ.ಆರ್.ಹೆಚ್.ಲಕ್ಷ್ಮೀಪತಿ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ.ಕೆ.ಶಿವಣ್ಣ, ಅಧ್ಯಕ್ಷರು, ಕವಿಮಂ ಇಂಜಿನಿಯರ್ ಗಳ ಸಂಘ, ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರ್ ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜಿನಿಯರ್ ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಧಿಕಾರಿಗಳ ಸಂಘ, ಬೆಂಗಳೂರು.

4 APR 2024

**ದಿನಾಂಕ: 01.01.2024 ರ ನಂತರ ಅನುಕಂಪ ಆಧಾರದ ನೇಮಕಾತಿಗಾಗಿ ಅರ್ಜಿ ಸಲ್ಲಿಸಲು 'ಎ' ಮತ್ತು 'ಬಿ' ಗುಂಪಿನ ಅಧಿಕಾರಿಗಳ ಒಟ್ಟು ಕುಟುಂಬದ ಮಾಸಿಕ ಆದಾಯದ ಮಿತಿ**

ರಾಜ್ಯ ಸರ್ಕಾರದ ಮೊದಲನೇ ದರ್ಜೆ ಸಹಾಯಕ ಹುದ್ದೆಯ ಸರಾಸರಿ ವೇತನ+ ತುಟ್ಟಿಭತ್ಯೆ+ ಬೆಂಗಳೂರು ನಗರದ ಮನೆಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆ

| | |
|---|---|
| ದಿನಾಂಕ: 01.04.2017 ರಲ್ಲಿರುವ ರಾಜ್ಯ ಸರ್ಕಾರದ ಮೊದಲನೇ ದರ್ಜೆಯ ಸಹಾಯಕ ಹುದ್ದೆಯ ವೇತನ ಶ್ರೇಣಿ | ರೂ.27650-650-29600-750-32600-850-36000-950-39800-1100-46400-1250-52650 |

ಸರಾಸರಿ ವೇತನ = ಕನಿಷ್ಠ ರೂ + (3/4 – X/60) X ಗರಿಷ್ಠ ಮತ್ತು ಕನಿಷ್ಠ ಮೊತ್ತದ ವ್ಯತ್ಯಾಸ
= ರೂ.27650 + (3/4 – 21/60) X ರೂ.25000
= ರೂ.27650 + (0.75 – 0.35) X ರೂ.25000
= ರೂ.27650 + (0.40) X ರೂ.25000
= ರೂ.27650 + ರೂ.10000
ರೂ.37650

ಒಟ್ಟು ಸರಾಸರಿ ವೇತನ+ 42.50% ತುಟ್ಟಿ ಭತ್ಯೆ+ ಬೆಂಗಳೂರು ನಗರದ ಮನೆ ಬಾಡಿಗೆ ಭತ್ಯೆ 24%+ ನಗರ ಪರಿಹಾರ ಭತ್ಯೆ (01.01.2024) ರಂತೆ
= ರೂ.37650+16001+9036+500
= ಮಾಸಿಕವಾಗಿ ***ರೂ.63,187/-***

*****